**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 87/2020**

**ಚಾ.ಸಾಃ 22, ಫ್ರಾ.ಸಾಃ 09**

| | |
|---|---|
| ಸಾಕ್ಷಿದಾರನ ಹೆಸರು | ಗಣೇಶ ನಾಯ್ಕ |
| ತಂದೆಯ ಹೆಸರು | ಹನುಮಂತ ನಾಯ್ಕ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಪಿಎಸ್ಐ, |
| ವಾಸ್ತವ್ಯ | ಕುಮಟಾ |

**ಸಾಕ್ಷಿಯನ್ನು ದಿನಾಂಕಃ 11-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 19-09-2022 ರಿಂದ 31-01-2024 ರ ವರೆಗೆ ಹೊನ್ನಾವರ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26-03-2019 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.93/2019 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ನೋಡುತ್ತಿದ್ದು ಅದನ್ನು ನಿಪಿ-6 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ನಂತರ ಈ ಪ್ರಕರಣದ ಕಡತವನ್ನು ಚಾಸಾ-23 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಎಂ. ಭಂಡಾರಿಯವರಿಂದಃ**

ಚಾಸಾ-1 ರವರು ದೂರನ್ನು ಬರೆದುಕೊಂಡು ತಂದಿದ್ದರು. ಆತ ಯಾರಿಂದ ಬರೆಸಿಕೊಂಡು ಬಂದಿದ್ದರು ನನಗೆ ಗೊತ್ತಿಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಅನುಗುಣವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ. **ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**